<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**</u>

<u>**ಚನ್ನರಾಯಪಟ್ಟಣ**</u>

<u>**ಸಿಸಿ ಸಂಖ್ಯೆ: 299/2024**</u> **CW-1** **PW-1**

<u>**ಸಾಕ್ಷಿಯನ್ನು ದಿಃ 06.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

| | |
|---|---|
| ಹೆಸರುಃ | ಭರತ್ ಕುಮಾರ್ ರೆಡ್ಡಿ |
| ತಂದೆಯ ಹೆಸರುಃ | ಶ್ರೀಶೈಲ ರೆಡ್ಡಿ |
| ವಯಸ್ಸುಃ | 33 |
| ವೃತ್ತಿಃ | ಅರಕ್ಷಕ ಉಪ ನಿರೀಕ್ಷಕು ನುಗ್ಗೇಹಳ್ಳಿ |
| ವಾಸ ಸ್ಥಳಃ | ನುಗ್ಗೆಹಳ್ಳಿ |

<u>**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**</u>

ನಾನು 08.03.2023 ರಿಂದ 12.08.2024 ರವರೆಗೂ ಚನ್ನರಾಯಪಟ್ಟಣದ ನಗರ ಠಾಣೆಯಲ್ಲಿ ಅರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಸಿದ್ದೇನೆ.

ದಿನಾಂಕಃ 13.12.2023 ರಂದು ಚನ್ನರಾಯಪಟ್ಟಣ ನಗರದಲ್ಲಿ ಗಸ್ತಿನಲ್ಲಿದ್ದಾಗ ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಭಾತ್ಮೀದಾರರಿಂದ ಕರೆ ಬಂದಿದ್ದು ಶ್ರೀನಿವಾಸಪುರ ಗ್ರಾಮ ಹೊಳೇನರಸೀಪುರ ರಸ್ತೆ ತಿರುಮಲ ವೈನ್ಸ್ ಪಕ್ಕದ ಚಿಲ್ಲರೆ ಅಂಗಡಿಯಲ್ಲಿ ಪುಷ್ಪಾ ಎಂಬುವವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಸಮಯ ಬೆಳಗ್ಗೆ 9.15 ಕ್ಕೆ ಠಾಣೆಗೆ ಹಿಂದುರುಗಿ ವರದಿ ತಯಾರಿಸಿ ಚಾಸಾ-2 ರವರಿಗೆ ನೀಡಿರುತ್ತೇನೆ.

ಸಾಕ್ಷಿ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನನ್ನ ವರದಿ ಆಧಾರದ ಮೇಲೆ ಚಾಸಾ-2 ರವರು ಪ್ರ ವ ವರದಿಯನ್ನು ತಯಾರಿಸಿರುತ್ತಾರೆ. ನಂತರ ಚಾಸಾ-5 ಮತ್ತು ಚಾಸಾ-6 ರವರನ್ನು ಠಾಣೆಗೆ ಬರಮಾಡಿಕೊಂಡು ಲಿಖಿತ ನೋಟೀಸ್ ನೀಡಿರುತ್ತೇನೆ.

ಸಾಕ್ಷಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಂತರ ಬೆಳಗ್ಗೆ 9.30 ರ ಸಮಯದಲ್ಲಿ ನಾನು, ಚಾಸಾ-3 ರಿಂದ ಚಾಸಾ-6 ರವರು ಸದರಿ ಸ್ಥಳಕ್ಕೆ ಹೋದಾಗ ಚಿಲ್ಲರೆ ಅಂಗಡಿಯಲ್ಲಿದ್ದ ಒಬ್ಬ ಮಹಿಳೆ ನಾವು ಸಮವಸ್ತ್ರದಲ್ಲಿ ಇರುವುದನ್ನು ನೋಡಿ ಅಲ್ಲಿಂದ ಓಡಿಹೋಗಿರುತ್ತಾರೆ. ನಂತರ ಪಂಚರ ಸಮಕ್ಷಮ ಅಲ್ಲಿಯೇ ಇಟ್ಟಿದ್ದ ಒಂದು ಬಿಳಿ ಪ್ಲಾಸ್ಟಿಕ್ ಕವರ್ ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ ಓರಿಜಿನಲ್ ಛಾಯ್ಸ್ ಡಿಲೆಕ್ಸ್ ವಿಸ್ಕಿ 30 ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಸದರಿ  ಟೆಟ್ರಾ ಪ್ಯಾಕ್ ಗಳ ಪೈಕಿ ಒಂದನ್ನು ಪಂಚರ ಸಮಕ್ಷಮ ತಜ್ಞರ ಪರೀಕ್ಷೆಗೆ ಕಳುಹಿಸಲು ತೆಗೆದು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಬಾಯನ್ನು ಮುಚ್ಚಿ ದಾರದಿಂದ ಕಟ್ಟಿ ಇಲಾಖಾ ಸೀಲನ್ನು ಹಾಕಿರುತ್ತೇನೆ. ಅದರ ಮೇಲೆ ಒಂದು ಚೀಟಿ ಅಂಟಿಸಿ ಅದರಲ್ಲಿ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ನಂತರ ಮಹಜರ್ ಕ್ರಮ ಬೆಳಗ್ಗೆ 10.00 ರಿಂದ 11.30 ರವರೆಗೆ

ಜರುಗಿಸಿ ಉಳಿದ ಮದ್ಯ ಮತ್ತು ಪ್ಲಾಸ್ಟಿಕ್ ಕವರ್ ನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ.

ಸಾಕ್ಷಿ ಸ್ಥಳ ಮತ್ತು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಸ್ಥಳದಲ್ಲಿ ಒಂದು ಫೋಟೋ ಸಹ ತೆಗೆದಿರುತ್ತೇವೆ.

ಸಾಕ್ಷಿ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಿಗೆ ನಿಪಿ–4 ಎಂದು ಸಾಕ್ಷಿಯ ಸಹಿಗಳನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

ಈ ಸಂಬಂಧ ನಾನು ಭಾರತೀಯ ಸಾಕ್ಷಿಯ ಅಧಿನಿಯಮ ಕಲಂ 65(ಬಿ) ಪ್ರಮಾಣ ಪತ್ರ ನೀಡಿರುತ್ತೇನೆ

ಸಾಕ್ಷಿ ಸದರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದಲ್ಲಿರುವ ಒಂದು ಬಿಳಿ ಚೀಲದಲ್ಲಿರುವ ಟೆಟ್ರಾ ಪ್ಯಾಕ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ–1 ಎಂದು, ಸಾಕ್ಷಿಯ ಸಹಿಯನ್ನು ಮು ಮಾ–1(ಎ) ಎಂದು ಗುರುತಿಸಲಾಯಿತು.

ದಿಃ 18.12.2023 ರಂದು ಆರೋಪಿ ಸ್ವತಃ .ಠಾಣೆಗೆ ಹಾಜರಾಗಿದ್ದು ನೋಟೀಸ್ ನೀಡಿರುತ್ತೇನೆ. ಅದೇ ದಿನ ಮು ಮಾ –1ನ್ನು ಚಾಸಾ–7 ರವರೊಂದಿಗೆ ಆರ್ ಎಫ್ ಎಸ್ ಎಲ್ ಮೈಸೂರಿಗೆ ತಜ್ಞರ ಪರೀಕ್ಷೆಗೆ ಕಳುಹಿಸಿರುತ್ತೇನೆ.

ದಿಃ 29.12.2023 ರಂದು ಆರ್ ಎಫ್ ಎಸ್ ಎಲ್ ಮೈಸೂರಿನಿಂದ ಚಾಸಾ-7 ರವರು ವರದಿಯನ್ನು ತಂದು ನೀಡಿರುತ್ತಾರೆ.

ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ದಿಃ 30.12.2023 ರಂದು ಉಳಿದ ಮದ್ಯ ಮತ್ತು ಕವರ್ ನ್ನು ಅಬಕಾರಿ ನೀರೀಕ್ಷಕರು ಚನ್ನರಾಯಪಟ್ಟಣ ಇವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ಸದರಿ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ದಿಃ 13.12.2023 ರಂದು ಚಾಸಾ-3 ರಿಂದ ಚಾಸಾ-6 ರವರ ಹೇಳಿಕೆ ಪಡೆದಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿದರೆ ಗುರುತಿಸಿರುತ್ತಾರೆ.

ದಿಃ 15.12.2024 ರಂದು ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಂನುನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಆರ್ ಜಿ ವಕೀಲರಿಂದ</u>**

ಆ ದಿನ ಒಂದು ದಾಳಿಯನ್ನು ನಡೆಸಿರುತ್ತೇನೆ. ಠಾಣೆಯನ್ನು ಬೆಳಗ್ಗೆ 9.30 ಕ್ಕೆ ಬಿಟ್ಟಿರುತ್ತೇವೆ. ಸ್ಥಳಕ್ಕೆ 10.00 ಗಂಟೆಗೆ ಹೋಗಿರುತ್ತೇವೆ. ಆರೋಪಿಯನ್ನು ನಾನು

ಸ್ಥಳದಲ್ಲಿ ನೋಡಿರುತ್ತೇನೆ. ಮೊದಲು ಪರಿಚಯ ಇರಲಿಲ್ಲ. ಸದರಿ ಅಂಗಡಿ ಇರುವ ಜಾಗದ ಮಾಹಿತಿ ಪಡೆದಿಲ್ಲ. ಸದರಿ ಅಂಗಡಿಯ ಮಾಲೀಕತ್ವ ಮತ್ತು ದಾಖಲೆ ಬಗ್ಗೆ ಪರಿಶೀಲಿಸಿಲ್ಲ. ಪರಿಶೀಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಚಾಸಾ-5 ಮತ್ತು ಚಾಸಾ-6 ರವರು ನಮ್ಮ ಸಿಬ್ಬಂದಿಯೇ ಠಾಣೆಗೆ ಕರೆತಂದಿರುತ್ತಾರೆ. ಬೆಳಗ್ಗೆ 9.15 ರ ಸಮಯದಲ್ಲಿ ಪಂಚರನ್ನು ಕರೆಸುವಂತೆ ಸಿಬ್ಬಂದಿಗೆ ಹೇಳಿರುತ್ತೇನೆ. ಪಂಚರನ್ನು ಕರೆತಂದ ಸಿಬ್ಬಂದಿಯ ಹೆಸರು ನೆನಪಿಲ್ಲ. ಪಂಚರ ಚನ್ನರಾಯಪಟ್ಟಣದಲ್ಲಿ ಇದ್ದರು. ಸದರಿ ಟೆಟ್ರಾ ಪ್ಯಾಕ್ ಗಳ ತಯಾರಿಕ ದಿನಾಂಕ ಮತ್ತು ಕಂಪನಿಯನ್ನು ನಮೂದಿಸಿಲ್ಲ, ನಮೂದಿಸಲು ಯಾವುದೇ ತೊಂದರೆ ಇಲ್ಲ. ಎಲ್ಲಾ ಟೆಟ್ರಾ ಪ್ಯಾಕ್ ಗಳನ್ನು ಪರೀಕ್ಷೆಗೆ ಕಳುಹಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಆ ದಿನ ಯಾವುದೇ ದಾಳಿ ನಡೆಸಿಲ್ಲ ಮತ್ತು 30 ಟೆಟ್ರಾ ಪ್ಯಾಕ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ಹೆಚ್ ಸಿ ಆಗಿರುತ್ತಾರೆ. ನಾನು ಚಾಸಾ-2 ರವರಿಗೆ ನಿಪಿ-1 ರಂತೆ ವರದಿ ನೀಡಿಲ್ಲ ಎಂದರೆ ಸರಿ. ನಾನು ಟೆಟ್ರಾ ಪ್ಯಾಕ್ ಗಳನ್ನು ತಜ್ಞರ ಪರೀಕ್ಷಗೆ ಕಳುಹಿಸಿಲ್ಲ ಮತ್ತು ವರದಿ ಪಡೆದಿಲ್ಲ. ನಾನು ಚಾಸಾ-3 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿ ಮಾಡಿಲ್ಲ ಅಂಗಡಿಯಲ್ಲಿ ಆರೋಪಿ ಇರಲಿಲ್ಲ ಹಾಗೂ ಯಾವುದೇ ಮದ್ಯವನ್ನು ಅಕ್ರಮವಾಗಿ ದಾಸ್ತಾನು ಮಾಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ

ಅಂಶಗಳಿಗೋಸ್ಕರ ಪ್ರಕರಣವನ್ನು ದಾಖಲಿಸಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**